# ಸೆಲೆಬ್ರಿಟಿ

■ ಹನಿ

## ಬರುತ್ತಿದ್ದಾಳೆ ಪ್ಯಾರಿಸ್



ಜಗತ್ತಿನಾದ್ಯಂತ ಚಿತ್ರರಸಿಕರಿಗೆ 'ಪ್ಯಾರೀ' ಆಗಿರುವ ಪ್ಯಾರಿಸ್ ಹಿಲ್ಟನ್, ಈ ತಿಂಗಳ ಮೂರನೇ ವಾರದಲ್ಲಿ ಮುಂಬೈಗೆ ಬರುತ್ತಿದ್ದಾಳೆ! ಆಕೆ ಇಲ್ಲಿರುವುದು ಮೂರು ರಾತ್ರಿ ಮತ್ತು ನಾಲ್ಕು ಹಗಲು ಅಷ್ಟೇ! ಆದರೆ ಆಕೆಯ ವಾಸ್ತವ್ಯ ಮತ್ತು ಕಾರ್ಯಕ್ರಮ-ಗಳಿಗಾಗಿ ಸಿದ್ಧತೆಗಳು ಈಗಾಗಲೆ ಆರಂಭವಾಗಿದ್ದು, ಭಾರತದ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ. ಬಂದ ಮೊದಲ ರಾತ್ರಿಯೇ ಬಾಲಿವುಡ್ ತಾರೆ-ಯೊಬ್ಬರ ನೈಟ್ ಪಾರ್ಟಿ, ಮರುದಿನ ಕರಣ್ ಜೋಹರ್ ಜತೆ ಟಾಕ್‌ಶೋ ಶೂಟಿಂಗ್, ಅದರ ಮರುದಿನ ಫ್ಯಾಶನ್ ಪತ್ರಿಕೆಗಳ ಸಂಪಾದಕರ ಜತೆಗೆ ಮೀಟಿಂಗ್ – ಇವೆಲ್ಲ ಈಗಾಗಲೆ ನಿಗದಿಯಾಗಿರುವ ಕಾರ್ಯಕ್ರಮಗಳು. ಜತೆಗೆ ಮಾಲ್‌ಗೆ ಭೇಟಿ ಕೊಟ್ಟು ಅಭಿಮಾನಿಗಳಿಗೆ ಕೈ ಬೀಸುವುದು, 'ಚಾರಿಟಿ' ಕಾರ್ಯಕ್ರಮದಲ್ಲಿ ಭಾಗ-ವಹಿಸುವುದು ಆಕೆಯ ಟೂರ್‌ಪ್ಲಾನ್. ಎಲ್ಲವೂ ನಡೆಯುವುದು ಮುಂಬೈಯಲ್ಲೇ.

ಪ್ರತಿಷ್ಠಿತ ಹಿಲ್ಟನ್ ಹೋಟೆಲ್ ಮಾಲೀಕ ಕಾನ್ರಾಡ್ ಹಿಲ್ಟನ್‌ನ ಈ ಮೊಮ್ಮಗಳು, ಗಾಯಕಿಯಾಗಿ, ಮಾಡೆಲ್ ಆಗಿ, ನಟಿಯಾಗಿ ಸುದ್ದಿ ಮಾಡಿದ್ದಕ್ಕಿಂತ ವಿವಾದಗಳಲ್ಲೇ ಸುದ್ದಿ ಮಾಡಿದ್ದು ಹೆಚ್ಚು. 2003ರಲ್ಲಿ ಈಕೆ ಭಾಗಿಯಾಗಿದ್ದಳೆಂಬ 'ಸೆಕ್ಸ್ ಟೇಪ್' ಭಾರೀ ಸುದ್ದಿ ಮಾಡಿತ್ತು. ಪದೇ ಪದೇ ಗಂಡಂದಿರನ್ನು, ಗೆಳೆಯರನ್ನು ಬದಲಿಸುವ ಈಕೆ (ಬರ್ತ್‌ಡೇ 17-2-1981), ಈಗಲೂ ಪ್ರೀತಿಗಾಗಿ ತಹತಹಿ-ಸುವವಳಂತೆ. ನಟ ಡಗ್ ರಿನ್‌ಹಾರ್ಟ್ ಜತೆಗಿನ ಕೂಡಿಕೆಯೇ ಹೆಚ್ಚು ಕಾಲ ಬಾಳಿದ್ದು. ಆ ಬಳಿಕ ನೈಟ್ ಕ್ಲಬ್‌ಗಳ ಒಡೆಯ ಸ್ಟೈ ವೇಟ್ಸ್ ಜತೆಗೂ ಸಂಸಾರ ನಡೆಯಿತು. ಈ ವರ್ಷದ ಆರಂಭದಲ್ಲಿ ಕೊಲ್ಲಿ ದೇಶಗಳಲ್ಲಿ ಸ್ವಲ್ಪ ಕಾಲ ವಾಸವಿದ್ದ ಬೆನ್ನಲ್ಲೇ ಈಕೆ ಇಸ್ಲಾಮ್‌ಗೆ ಮತಾಂತರ ಮಾಡಿದಳೆಂದೂ ಸುದ್ದಿ ಹಬ್ಬಿತ್ತು. ಬಾಲಿವುಡ್‌ನ ಪ್ರತಿಷ್ಠಿತ ತಾರೆಯರು ಈಕೆಯ ಪಾರ್ಟಿಯಲ್ಲಿ ಪಾಲ್ಗೊಳ್ಳಲು ಕಾತರದಿಂದ ಕಾದಿದ್ದಾರಂತೆ!

## ಇನ್ನೊಬ್ಬ ಅಲಿ

ಪಾಕಿಸ್ತಾನದಿಂದ ಬಂದು ಬಾಲಿವುಡ್‌ನಲ್ಲಿ ಮಿಂಚಿದ ಗಾಯಕರು ಹಲವರು. ಅವರಲ್ಲಿ ದೊಡ್ಡ ಸುದ್ದಿ ಮಾಡಿದ್ದು ದೈತ್ಯದೇಹಿ ಗಾಯಕ ನುಸ್ರತ್ ಫತೇ ಅಲಿ ಖಾನ್. ಆತ ತೀರಿಕೊಂಡ ಬಳಿಕ ರಾಹತ್ ಬಂದರೂ ದೊಡ್ಡ ಆಕರ್ಷಣೆ ಅನ್ನಿಸಲಿಲ್ಲ. ಈಗ ಇನ್ನೊಬ್ಬ ಗಾಯಕ ಅಲಿ ಅಬ್ಬಾಸ್ ಜಾಫರ್ ಬಾಲಿವುಡ್‌ನಲ್ಲಿ ಮಿಂಚುತ್ತಿದ್ದಾನೆ.

ಅಲಿ ಜಾಫರ್ ಪಾಕಿಸ್ತಾನದ ಜನಪ್ರಿಯ ಟೀವಿ ನಟ, ಗಾಯಕ, ಸಂಗೀತ ನಿರ್ದೇಶಕ, ಚಿತ್ರ ಕಲಾವಿದ, ನಿರ್ಮಾಪಕ ಮತ್ತು ನಿರ್ದೇಶಕ. ಪಾಕಿಸ್ತಾನದಲ್ಲಿ ಗಾಯಕನಾಗಿ 'ಪ್ರಿನ್ಸ್ ಆಫ್ ಪಾಪ್' ಎಂದೇ ಜನಪ್ರಿಯನಾಗಿರುವ ಈತನ 70 ಲಕ್ಷಗಳಷ್ಟು ಕ್ಯಾಸೆಟ್, ಆಲ್ಬಂಗಳು ಮಾರಾಟ ಕಂಡಿವೆ. ಬಾಲಿವುಡ್‌ನಲ್ಲಿ ಸಂಗೀತದ ಭವಿಷ್ಯವನ್ನು ಅರಸಿಕೊಂಡು ಬಂದರೂ ಈತ ಹೆಚ್ಚು ಆಫರ್‌ಗಳನ್ನು ಪಡೆಯುತ್ತಿರುವುದು ನಟನೆಗೆ! ಈತ ನಟಿಸಿದ ಮೊದಲ ಚಿತ್ರ 'ತೇರೆ ಬಿನ್ ಲಾಡೆನ್' ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದ ಬಳಿಕ ಹಲವು ನಿರ್ಮಾಪಕರು ಈತನ ಮೇಲೆ ದುಡ್ಡು ಹೂಡಲು ಸ್ಪರ್ಧೆ



ನಡೆಸುತ್ತಿದ್ದಾರೆ. ಈಗಾಗಲೆ 'ಏಷ್ಯಾದ ಅತ್ಯುತ್ತಮ ಬಾಲಿವುಡ್ ಸಿಂಗರ್' ಪ್ರಶಸ್ತಿ ಗೆದ್ದಿರುವ ಈತ 'ಎಂಟಿವಿ ಸ್ಟೈಲ್ ಪ್ರಶಸ್ತಿ'ಯನ್ನೂ ಗೆದ್ದಿದ್ದಾನೆ. ಕಳೆದ ವರ್ಷ 'ಈಸ್ಟರ್ನ್ ಐ' ನಡೆಸಿದ 'ಏಷ್ಯಾದ ಸೆಕ್ಸಿಯೆಸ್ಟ್ ಯುವಕ'ರಲ್ಲಿ ಈತನಿಗೆ ನಾಲ್ಕನೇ ಸ್ಥಾನ ಲಭಿಸಿತ್ತು.

ಅಲಿ ಜಾಫರ್, ಬಾಲಿವುಡ್ ಹೀರೊ ಅಮೀರ್ ಖಾನ್‌ಗೆ ದೂರದ ಸಂಬಂಧಿ ಕೂಡಾ. ಅಲಿಯ ಹೆಂಡತಿ ಆಯೆಶಾ, ಅಮೀರ್‌ಖಾನ್‌ನಿಗೆ ಹೆಂಡತಿಯ ಕಡೆಯಿಂದ ಸೊಸೆ ಆಗಬೇಕು. ಇದೀಗ ಅಮೀರ್‌ನ ಅಳಿಯ ಇಮ್ರಾನ್ ಖಾನ್ ನಟಿಸಿರುವ ಚಿತ್ರ 'ಮೇರೆ ಬ್ರದರ್ ಕಿ ದುಲ್ಹನ್'ನಲ್ಲೂ ಅಲಿ ಹಾಡು ಮತ್ತು ನಟನೆಯಲ್ಲಿ ಮಿಂಚಿದ್ದಾನೆ.

2 ವರ್ಷಗಳ ಹಿಂದೆ ಮದುವೆಯಾದ ಅಲಿ ಜಾಫರ್, ಕಳೆದ ವರ್ಷ ಅಪ್ಪನೂ ಆಗಿದ್ದಾನೆ. ಈ ವರ್ಷದ ಆರಂಭದಲ್ಲಿ ಹೊರತಂದ 'ಜೂಮ್' ಆಲ್ಬಂ ಮಾರುಕಟ್ಟೆಯಲ್ಲಿ ಸಾಕಷ್ಟು ಹಣ ಮಾಡಿದೆ. ಬಾಲಿವುಡ್‌ನಲ್ಲೀಗ 'ಲಂಡನ್ ಪ್ಯಾರಿಸ್ ನ್ಯೂಯಾರ್ಕ್' ಮತ್ತು 'ಚಶ್ಮೆ ಬದ್ದೂರ್' ಎಂಬ ರಿಮೇಕ್ ಚಿತ್ರಗಳಲ್ಲೂ ಈತ ನಟಿಸುತ್ತಿದ್ದಾನೆ. ಸದ್ಯದ ಅಂದಾಜು ನೋಡಿದರೆ ಈತ ಬಾಲಿವುಡ್‌ನಲ್ಲೇ ತಳವೂರುವಂತಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65